O.S. No.245/2018 D.W. 2 Dated :16-08-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ -ಶ್ರೀ. ಕೆ.ಎನ್. ವಕೀಲರಿಂದ.

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 1968 ರಲ್ಲಿ ಜನಿಸಿರುತ್ತೇನೆ. ನಾನು 2000 ನೇ ಇಸವಿಯಲ್ಲಿ ವಯಸ್ಕನಾಗಿದ್ದೆನು. ಆ ವೇಳೆಯಲ್ಲಿ ನನಗೆ ದಾವಾ ಸ್ವತ್ತಿನ ಬಗ್ಗೆ ಅರಿವಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಲಿ ವಳಗೇರಹಳ್ಳಿ ಗ್ರಾಮದ ಡೈರಿಯಲ್ಲಿ ಕಾರ್ಯದರ್ಶಿಯಾಗಿರುತ್ತೇನೆ. 1 ನೇ ಪ್ರತಿವಾದಿ ಡೈರಿಯ ಮಾಜಿ ಅಧ್ಯಕ್ಷರಾಗಿದ್ದರು. 1 ನೇ ಪ್ರತಿವಾದಿ ಅಧ್ಯಕ್ಷ ಸ್ಥಾನದಲ್ಲಿದ್ದಾಗ ನನ್ನನ್ನು ಕಾರ್ಯದರ್ಶಿಯಾಗಿದ್ದೆನು. ನನಗೆ ವಳಗೇರಹಳ್ಳಿ ಗ್ರಾಮದಲ್ಲಿ ಸ.ನಂ. 42, 44, 36/1,19 ರಲ್ಲಿ ನನಗೆ ಜಮೀನಿದೆ. ನನ್ನ ಪ್ರಮಾಣ ಪತ್ರಿಕೆಯ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿ ಯಾವ ಸಾಲಿನಿಂದ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸಾಕ್ಷಿಯು ಯಾವ ವರ್ಷದಿಂದ ಎಂದು ನನಗೆ ಹೇಳಲಾಗುವುದಿಲ್ಲ , ಆದರೆ 1 ನೇ ಪ್ರತಿವಾದಿ ಸುಮಾರು 35 ರಿಂದ 40 ವರ್ಷಗಳಿಂದ ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಆನಂದ ಮತ್ತು ಲಕ್ಷ್ಮಮ್ಮ ಹಾಗೂ ಪಾರ್ವತಮ್ಮನವರ ಜಮೀನಿನ ಸರ್ವೆ ನಂಬರಿನ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಆನಂದ ಮತ್ತು ಲಕ್ಷ್ಮಮ್ಮ ಹಾಗೂ ಪಾರ್ವತಮ್ಮ ಎಷ್ಟೆಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಎಂದಿಗೂ ಸಹ ಅವರು ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದಿಲ್ಲ ಎಂದು ನುಡಿಯುತ್ತಾರೆ. ಆನಂದ ಮತ್ತು ಲಕ್ಷ್ಮಮ್ಮ ಹಾಗೂ ಪಾರ್ವತಮ್ಮ ನವರಿಗೆ ಜಮೀನುಗಳು ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸ.ನಂ. 78, 79, 80 ಅನ್ನು ಕೃಷ್ಣೇಗೌಡರಿಗೆ ಸರ್ಕಾರದವರು ಜಮೀನನ್ನು ಮಂಜೂರು ಮಾಡಿರುತ್ತಾರೆ . ಕೃಷ್ಣೇಗೌಡರಿಗೆ ಮಂಜೂರಾದ ಸ.ನಂ.78 ರ ಜಮೀನಿಗೆ ಚಕ್ಕುಬಂದಿಃ ಪೂರ್ವಕ್ಕೆಃ ಸುಳುಗೋಡು ದರಖಾಸ್ತು ಭೂಮಿ , ದಕ್ಷಿಣಕ್ಕೆಃ ಸ್ವಾಮಿಗೌಡ , ಉತ್ತರಕ್ಕೆಃ ಚನ್ನಯ್ಯ ಮತ್ತು ಚಂದ್ರಶೇಖರ್ ರವರು

ಜಮೀನು. ಪಶ್ಚಿಮಕ್ಕೆಃ ಬಿಂದಮ್ಮನವರ ಜಮೀನು. ಬಿಂದಮ್ಮನವರಿಗೆ ಸಹಾ ಸರ್ಕಾರದಿಂದ ಸ.ನಂ. 44 ರಲ್ಲಿ ಜಮೀನು ಮಂಜೂರಾಗಿರುತ್ತದೆ. ಆನಂದ , ಲಕ್ಷ್ಮಮ್ಮ ಮತ್ತು ಪಾರ್ವತಮ್ಮ ಮೂರು ಜನರಿಗೂ ಸಹಾ ಒಂದೇ ಬೌಂಡರಿಯಲ್ಲಿ ಸ್ವತ್ತು ಮಂಜೂರಾಗಿರುತ್ತದೆ. ಕೃಷ್ಣೇಗೌಡ ಮತ್ತು ಬಿಂದಮ್ಮನವರಿಗೆ ಮೊದಲು ಮಂಜೂರಾಗಿದ್ದು , ನಂತರದಲ್ಲಿ ನಮಗೆ ಸ್ವತ್ತು ಮಂಜೂರಾಗಿತ್ತು. ಸ ನಂ 44 ರಲ್ಲಿ ಎರಡೂವರೆ ಎಕರೆ ಜಮೀನು ಕೃಷ್ಣೇಗೌಡರಿಗೆ ಮಂಜೂರಾದ 15 ವರ್ಷಗಳ ನಂತರ ನಮಗೆ ಮಂಜೂರಾಗಿರುತ್ತದೆ . ಕೃಷ್ಣೇಗೌಡ ಮತ್ತು ಬಿಂದಮ್ಮನವರಿಗೆ ಮಂಜೂರಾಗಿರುವ ಜಮೀನಿನ ದಾಖಲಾತಿಗಳನ್ನು ಹಾಗೂ ಪಹಣಿ ಮತ್ತು ಮ್ಯುಟೇಶನ್ ಗಳನ್ನು ನಾನು ನೋಡಿರುವುದಿಲ್ಲ. ನನಗೆ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ವನ್ನುಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.